ದಿನಾಂಕಃ **27-07-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯು ನನಗೆ ಕನ್ನಡ ಭಾಷೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ತೆಲುಗು ಭಾಷೆಯಲ್ಲಿ ಪ್ರಶ್ನೆ ಕೇಳಬೇಕಾಗುತ್ತದೆ ಎಂದು ವಿನಂತಿಸಿಕೊಂಡಿರುತ್ತಾರೆ. ಆದ್ದರಿಂದ ಎರಡೂ ಪಕ್ಷಗಾರರ ಒಪ್ಪಿಗೆಯ ಮೇರೆಗೆ ಶ್ರೀ ಪಿ ಎನ್ ಆರ್ ವಕೀಲರನ್ನು ಭಾಷಾಂತರಗಾರರನ್ನಾಗಿ ನಿರ್ಧರಿಸಿ ವಕೀಲರಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಭಾಷಾಂತರಕಾರರು ನನಗೆ ಬಾಲ್ಯದಿಂದಲೂ ತೆಲುಗು ಭಾಷೆ ಮತ್ತು ಕನ್ನಡ ಭಾಷೆ ಗೊತ್ತಿರುತ್ತದೆ ಮತ್ತು ನಾನು ಕನ್ನಡ ಭಾಷೆಯಿಂದ ತೆಲುಗು ಭಾಷೆಗೆ ಮತ್ತು ತೆಲುಗು ಭಾಷೆಗೆ ಭಾಷಾಂತರ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತೇನೆ ಎಂದು ನುಡಿದಿರುತ್ತಾರೆ.

ಪುನಃ ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಕೆ ವಕೀಲರಿಂದಃ

ವಾದಿ ಈ ದಾವೆಯನ್ನು ತಿರುಮಲದೇವರ ಹಳ್ಳಿ ಗ್ರಾಮದ ಆಸ್ತಿ ನಂ. 101/74 ರಲ್ಲಿರುವ ಮನೆಗೆ ಹೂಡಿರುತ್ತಾರೆ . ಸದರಿ ಮನೆ ಪೂರ್ವ ಪಶ್ಚಿಮ 6 ಗಜ ಉತ್ತರ ದಕ್ಷಿಣ 5 ½ ಗಜ ಇರುತ್ತದೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿ ಮನೆ ಕಟ್ಟಿರುತ್ತಾರೆ ಎಂದು ಗೊತ್ತಾಗಿರುತ್ತದೆ . ನಾನು 3 ತಿಂಗಳ ಹಿಂದೆ ತಿರುಮಲದೇವರ ಹಳ್ಳಿ ಗ್ರಾಮಕ್ಕೆ ಹೋಗಿದ್ದೆನು. ನನ್ನ ಸಾಕ್ಷಿ

ಪ್ರಮಾಣ ಪತ್ರದಲ್ಲಿ ಕೋರಿರಾಮಯ್ಯ ನವರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರು, ಅವರ ಮರಣದ ನಂತರ ಅವರ ವಾಸರುದಾರರು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ನಮೂದು ಮಾಡಿಸಿರುತ್ತಾನೆ.

ನಾನು ಹುಟ್ಟಿದ್ದಾಗಿನಿಂದಲೂ ಉಡಗಲಪಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತೇನೆ . 2000 ಸಾಲಿನಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಅಣ್ಣಂದಿರು ತಿರುಮಲದೇವರ ಹಳ್ಳಿ ಗ್ರಾಮದಲ್ಲಿ ವಾಸವಾಗಿರಲಿಲ್ಲ . ನಾನು ಮತ್ತು ನನ್ನ ಅಣ್ಣಂದಿರು ತಿರುಮಲದೇವರ ಹಳ್ಳಿ ಗ್ರಾಮದಲ್ಲಿ ಶಾಲೆಗೆ ದಾಖಲಾಗಿರುವುದಿಲ್ಲ .

ತಿರುಮಲದೇವರಹಳ್ಳಿ ಗ್ರಾಮದ ಸೂರ್ಯನಾರಾಯಣ ರೆಡ್ಡಿ , ಎನ್ ಹೆಚ್ . ಚಿಕ್ಕನರಸಿಂಹಪ್ಪ , ಹೆಚ್. ನರಸಪ್ಪ , ನಾಗ್ರಾನಳ್ಳಿ ಯ ವಿ.ನಾರಾಯಣಪ್ಪ ಮತ್ತು ಪೋಲೇನಹಳ್ಳಿ ಯ ಪತ್ರ ,ಬರಹಗಾರ ಪಿ.ಎಲ್ . ರಾಮರಾವ್ ರವರ ಪರಿಚಯ ನನಗೆ ಇರುವುದಿಲ್ಲ. ನನಗೆ ಅವರ ಮೇಲೆ ಯಾವುದೇ ದ್ವೇಷ ಇರುವುದಿಲ್ಲ ಎಂದರೆ ಸರಿ . ನನ್ನ ಅಣ್ಣಂದಿರಾದ ದೊಡ್ಡನಾಗಪ್ಪ ಮತ್ತು ಚಿಕ್ಕನಾಗಪ್ಪ ಉಡಗಲಪಲ್ಲಿ ಯಲ್ಲಿ ವಾಸವಾಗಿರುತ್ತಾರೆ. ನಾನು , ನರಸಿಂಹಮೂರ್ತಿ ಮತ್ತು ನನ್ನ ಅಣ್ಣಂದಿರು ಎಲ್ಲರೂ ಒಂದೇ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ .

ನನ್ನ ತಂದೆ ದಾವಾ ಸ್ವತ್ತನ್ನು ನನ್ನ ಚಿಕ್ಕಪ್ಪನಿಗೆ ಬಿಟ್ಟುಕೊಟ್ಟ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರ ನಾನು ಹುಟ್ಟುವ ಮೊದಲೇ

ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ದಾವಾ ಸ್ವತ್ತನ್ನು ಬಿಟ್ಟುಕೊಟ್ಟ ನಂತರ ನನ್ನ ಚಿಕ್ಕಪ್ಪನ ಹೆಸರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಯಾಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ.

2000 ನೇ ಸಾಲಿನಿಂದ ದಾವಾ ಸ್ವತ್ತಿನ ಖಾತೆ ವೆಂಕಟರವಣಪ್ಪನವರ ಹೆಸರಿನಲ್ಲಿ ಬರುತ್ತಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವೆಂಕಟರವಣಪ್ಪ ರವರ ಸೊಸೆ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಉಳಿದ ಆಸ್ತಿಯಲ್ಲಿ ವೆಂಕಟರವಣಪ್ಪನ 3 ಜನ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು, ನನ್ನ ತಂದೆ ಮತ್ತು ನಮ್ಮ ಅಣ್ಣಂದಿರು 2000 ನೇ ಸಾಲಿನಲ್ಲಿ ದಾವಾಸ್ವತ್ತನ್ನು ರುಮಲದೇವರಹಳ್ಳಿ ಗ್ರಾಮದ ಸೂರ್ಯನಾರಾಯಣ ರೆಡ್ಡಿ , ಎನ್ ಹೆಚ್ . ಚಿಕ್ಕನರಸಿಂಹಪ್ಪ , ಹೆಚ್. ನರಸಪ್ಪ , ನಾರ್ಗಾನಳ್ಳಿ ಯ ವಿ.ನಾರಾಯಣಪ್ಪ ಮತ್ತು ಪೋಲೇನಹಳ್ಳಿ ಯ ಪತ್ರ ,ಬರಹಗಾರ ಪಿ.ಎಲ್ . ರಾಮರಾವ್ ರವರ ಸಮಕ್ಷಮ ವೆಂಕಟರವಣಪ್ಪ ರವರಿಂದ ಹಣ ಪಡೆದುಕೊಂಡು ಮಾರಾಟ ಮಾಡಿ ಸ್ವಾಧೀನವನ್ನು ವಹಿಸಿಕೊಟ್ಟು ಉಡಗಲಪಲ್ಲಿ ಗ್ರಾಮಕ್ಕೆ ಹೋಗಿರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನಾನು ಹುಟ್ಟುವ ಪೂರ್ವದಲ್ಲಿಯೇ ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ಕೊಟ್ಟು ಉಡುಗಲಪಲ್ಲಿ ಗ್ರಾಮಕ್ಕೆ ಹೋಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ನರಸಿಂಹಮೂರ್ತಿ ಬಂದು ನನ್ನನ್ನು ಮತ್ತು ನನ್ನ ಅಣ್ಣಂದಿರನ್ನು ದಾಳಪ್ಪ ಮತ್ತು ವೆಂಕಟರವಣಪ್ಪ ನವರ ಮಧ್ಯೆ ಯಾವುದೇ ದಾಖಲೆ ಆಗಿರುವುದಿಲ್ಲ. ಆದ್ದರಿಂದ

ವೆಂಕಟರವಣಪ್ಪನವರ ಮಕ್ಕಳಿಂದ ಆಸ್ತಿಯನ್ನು ಕಿತ್ತುಕೊಳ್ಳೋಣ ಎಂದು ನಮ್ಮನ್ನು ಕೇಳಿರುತ್ತಾರೆ ಎಂದು ಸೂಚಿಸಿರುವುದು ಸರಿಯಲ್ಲ. ನಮ್ಮ ಅಣ್ಣಂದಿರು ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಪುನಃ ಕೇಳುವುದು ಸರಿಯಲ್ಲ ಎಂದು ತಿಳಿಸಿದ್ದರು ನಾನು ನರಸಿಂಹಮೂರ್ತಿಯ ಹೇಳಿಕೆಯ ಮೇರೆಗೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ